Ex. No.39/2017
ಆರ್ ಡಬ್ಲ್ಯು -4

ದಿನಾಂಕಃ 21-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ- ಡಿಹೆಚ್ ಆರ್ ಪರ ಶ್ರೀ. ಎ ಎ ಜಿ ವಕೀಲರಿಂದ.**

ಸಾಕ್ಷ್ಯ ಪ್ರಮಾಣ ಪತ್ರದ ಸಂಗತಿಗಳನ್ನು ನಾನು ಓದಿಲ್ಲ. ದರಖಾಸ್ತುದಾರರು ಮತ್ತು ತೀರ್ಪುಖಣಿದಾರರ ನಡುವೆ ಏನು ವ್ಯವಹಾರ ಆಗಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಂಗಪ್ಪ ಮತ್ತು ಮಲ್ಲಿಕಾರ್ಜುನ ಕುಂದಗೋಳ ಇವರು ಏನು ಅರ್ಜಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪರಮೇಶ್ವರಪ್ಪ ಇವರ ಮನೆತನಕ್ಕೆ ಒಟ್ಟು 30 ಎಕರೆ ಜಮೀನು ಇರುತ್ತದೆ. ಸರ್ವೆ ನಂ. 15 ರ ಕ್ಷೇತ್ರ ಬಿಟ್ಟು ಉಳಿದ ಸರ್ವೆ ನಂಬರ ಕ್ಷೇತ್ರ ಹೇಳಲು ಬರುವುದಿಲ್ಲ. 15 ನೇ ಸರ್ವೆ ನಂಬರ ಜಮೀನು ತೀರ್ಪುಖಣಿದಾರರ ಸ್ವಾಧೀನದಲ್ಲಿ ಇತ್ತು ಎಂದರೆ ಸರಿ. ತೀರ್ಪುಖಣಿದಾರರ ಕುಟುಂಬದ ಹಿರೇತನ ನಾನು ಮಾಡುವುದಿಲ್ಲ ಎಂದರೆ ಸರಿ. ಅವರ ಕುಟುಂಬದ ಆದಾಯ ಎಷ್ಟು ಬರುತ್ತದೆ ಎಂಬ ಬಗ್ಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಅವರ ಆದಾಯ ಸರಿ ಇತ್ತು. ಅವರಿಗೆ 10 ರಿಂದ 12 ಲಕ್ಷ ಆದಾಯ ಬರುತ್ತಿತ್ತು. 15 ನೇ ಸರ್ವೆ ನಂಬರ ಜಮೀನು ಪರಮೇಶ್ವರಪ್ಪನಿಗೆ ವಾಟ್ನಿಯಲ್ಲಿ ಬಂದ ಜಮೀನು ಎಂದರೆ ಸರಿ. ಸದರಿ ಪರಮೇಶ್ವರಪ್ಪ ತೀರ್ಪುಖಣಿದಾರರಿಗೆ ಸದರಿ ಜಮೀನು ಖರೀದಿ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಮೀನು ಈ ಹೊತ್ತು ಯಾರ ಹೆಸರಿಗೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 15 ರ ಪೈಕಿ 10 ಎಕರೆ ಜಮೀನು ಡಿಕ್ರಿದಾರರ ಹೆಸರಿಗೆ ಪಹಣಿಯಾಗಿರುತ್ತದೆ ಎಂದರೆ ಸರಿಯಲ್ಲ. ಹಾಗೇ ಸದರಿ ಸರ್ವೆ ನಂಬರಿನ ಒಟ್ಟು ಕ್ಷೇತ್ರ ಮಹಾದೇವಪ್ಪನ ಮಕ್ಕಳ ಹೆಸರಿನಲ್ಲಿ ಇರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಕ್ರಿದಾರರ ಹೆಸರಿಗೆ 10 ಎಕರೆ ಜಮೀನು ನ್ಯಾಯಾಲಯದ ಆದೇಶದ ಪ್ರಕಾರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈಗ ಡಿಕ್ರಿದಾರರು ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಕುರಿತು ಈ ಅರ್ಜಿಯನ್ನು ಸಲ್ಲಿಸಿದ್ದು ಅದಕ್ಕೆ ಸುಳ್ಳು ತಕರಾರು ಮಾಡಿ ನನ್ನಿಂದ ಸಾಕ್ಷಿ

ಮಾಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೆ ಅರ್ಜಿಯ ವಿಷಯದ ಬಗ್ಗೆ ಗೊತ್ತಿಲ್ಲದಿದ್ದರೂ ಅವರ ಮುಲಾಜಿಗೆ ಬಿದ್ದು ನಾನು ಸುಳ್ಳು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).